**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,**

**ಹೊನ್ನಾವರ**

**ಫೌಜುದಾರಿ ಪ್ರಕರಣ ಸಂಖ್ಯೆ : 92/2020**

**ಚಾ.ಸಾಃ 7, ಫ್ರಾ.ಸಾಃ 3**

| | |
|---|---|
| ಸಾಕ್ಷಿದಾರನ ಹೆಸರು | ಗಣೇಶ ಚಂದಾವರ |
| ಗಂಡನ ಹೆಸರು | ನಾಗಪ್ಪ ಚಂದಾವರ |
| ವಯಸ್ಸು | 70 ವರ್ಷಗಳು |
| ಉದ್ಯೋಗ | ನಿವೃತ್ತಿ ನೌಕರ |
| ವಾಸ್ತವ್ಯ | ಚಂದಾವರ |

**ಸಾಕ್ಷಿಯನ್ನು ದಿನಾಂಕಃ 09-09-2022 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನಾನು ನಿವೃತ್ತ ನೌಕರನಿದ್ದು ಚಂದಾವರದ ಗಣಪತಿ ಕೇರಿಯಲ್ಲಿರುವ ದುರ್ಗಾಪರಮೇಶ್ವರಿ ದೇವಸ್ಥಾನದ ಕಮೀಟಿಯ ಕಾರ್ಯದರ್ಶಿಯಾಗಿ ಕೆಲಸ ಮಾಡುತ್ತಿದ್ದೇನೆ. ಸದರಿ ದೇವಸ್ಥಾನದ ಬಾಗಿಲು ಬೆಳಿಗ್ಗೆ 08-00 ಕ್ಕೆ ತೆಗೆದು ಸಾಯಂಕಾಲ 08-00 ರ ವರೆಗೆ ತೆರೆದಿರುತ್ತದೆ. ಸದರಿ ದೇವಸ್ಥಾನದ ಬಾಗಿಲನ್ನು ಅರ್ಚಕರಾದ ಚಾಸಾ-6 ರಾಜೇಶ ತೆರೆದು ಮುಚ್ಚುತ್ತಾರೆ.

ದಿನಾಂಕ 18-07-2019 ರಂದು ನಾನು ಮನೆಯಲ್ಲಿದ್ದಾಗ ಬೆಳಿಗ್ಗೆ 08-00 ರ ಸಮಯಕ್ಕೆ ಚಾಸಾ-6 ನನಗೆ ಕರೆ ಮಾಡಿ ದೇವಸ್ಥಾನದ ಬಾಗಿಲನ್ನು ಯಾರೋ ಒಡೆದಿರುವುದಾಗಿ ತಿಳಿಸಿರುತ್ತಾರೆ. ನಂತರ ನಾನು ದೇವಸ್ಥಾನದ ಬಳಿ ಬಂದು ನೋಡಲಾಗಿ ಬೀಗ ಮುರಿದುಕೊಂಡಿತ್ತು. ಊರಿನ ಜನರನ್ನು ಸೇರಿಸಿ ಓಪನ್ ಮಾಡಲಾಗಿ ಕಾಣಿಕೆ ಹುಂಡಿ ಡಬ್ಬ ಇರಲಿಲ್ಲ. ನಾವು ಹುಡುಕಲಾಗಿ ದೇವಸ್ಥಾನದ ಹಿಂಭಾಗದಲ್ಲಿ ಕಾಣಿಕೆ ಹುಂಡಿ ಇತ್ತು. ಅದರ ಬೀಗವನ್ನು ಮುರಿಯಲಾಗಿತ್ತು ಒಳಗಡೆ ಇದ್ದ ಹಣ ಇರಲಿಲ್ಲ. ನಂತರ ಕಮೀಟಿಯವರು ಎಲ್ಲಾ ಸೇರಿ ಕಳ್ಳತನದ ಬಗ್ಗೆ ಪಿರ್ಯಾದು ಕೊಟ್ಟಿರುತ್ತೇವೆ. ಕಳ್ಳತನದ ಬಗ್ಗೆ ನಾನು ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ. ನಂತರ ನಾನು ಹೊನ್ನಾವರ ಠಾಣೆಗೆ ಹೋಗಿರುವುದಿಲ್ಲ.

**(ಈ ಸಂದರ್ಭದಲ್ಲಿ ಸ.ಸ.ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀಸವಾಲಿಗೆ ಒಳಪಡಿಸಲು ಅನುಮತಿಯನ್ನು ಕೋರಿರುತ್ತಾರೆ. ಅನುಮತಿಸಲಾಯಿತು.)**

**ಪಾಟೀಸವಾಲುಃ ಸಹಾಯಕ ಸರಕಾರಿ ಅಭಿಯೋಜಕರಿಂದ,**

ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಗಳು ನನಗೆ ಗೊತ್ತು. ನನ್ನನ್ನು ಪೋಲಿಸರು ಎರಡನೇಯ ಬಾರಿ ಠಾಣೆಗೆ ಕರೆಸಿ ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಗಳನ್ನು ತೋರಿಸಿ ಅವರೇ ಕಳ್ಳತನ ಮಾಡಿದ ವ್ಯಕ್ತಿಗಳು ಎಂದು ಹೇಳಿದರು ಎಂದರೆ ಸರಿಯಲ್ಲ. ಅದಕ್ಕೆ ಸಂಬಂಧಿಸಿದಂತೆ ಮರು ಹೇಳಿಕೆ ನೀಡಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ನೀಡಿದ್ದಾರೆ ಎಂದು ಹೇಳುವ ಮರು ಹೇಳಿಕೆಯನ್ನು ಸಸಅ ರವರು ಸಾಕ್ಷಿಗೆ ಓದಿ ಹೇಳಿದ್ದು ಸಾಕ್ಷಿ ಅದನ್ನು ನಿರಾಕರಿಸಿದ್ದರಿಂದ ಸದರಿ ಮರು ಹೇಳಿಕೆಯನ್ನು

ನಿಪಿ–5 ಎಂದು ಗುರುತಿಸಲಾಯಿತು. ನಾನು ನಿಪಿ–5ರ ಪ್ರಕಾರ ಹೇಳಿಕೆ ನೀಡಿದ್ದರೂ ಸಹ ಆರೋಪಿಗಳಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲುಃ ಆರೋಪಿಗಳ ಪರ ವಕೀಲರಾದ ಶ್ರೀ ವಿಠ್ಠಲ ಎಂ. ಭಂಡಾರಿಯವರಿಂದಃ**

ನಾನು ದೇವಸ್ಥಾನದ ಬಳಿ ಹೋಗುವಷ್ಟರಲ್ಲಿ ಸ್ಥಳದಲ್ಲಿ ಸಾಕಷ್ಟು ಜನ ಸೇರಿದ್ದರು ಎಂದರೆ ಸರಿ. ನಾನು ಹೋದ ನಂತರ ಚಾಸಾ–1 ಸ್ಥಳಕ್ಕೆ ಬಂದಿರುತ್ತಾರೆ. ಕಾಣಿಕೆ ಹುಂಡಿಯಲ್ಲಿ ಅಂದಾಜು 2,000/– ರೂಪಾಯಿ ಇತ್ತು. ಕಾಣಿಕೆ ಡಬ್ಬಿಯನ್ನು ಪೋಲಿಸರು ತೆಗೆದುಕೊಂಡು ಬಂದಿರುವುದಿಲ್ಲ. ದೇವಸ್ಥಾನದಲ್ಲಿ ಕಳ್ಳತನವಾಗಿಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾದಂಡಾಧಿಕಾರಿಗಳು, ಹೊನ್ನಾವರ**